'ನೀನು ಹೋದ್ದಾದರೂ ಯಾತಕ್ಕೆ? ಹೋಗಿದ್ದಾದರೂ ಯಾರೊಂದಿಗೆ? ಅವನೇನು ನಿನ್ನ ಜಾತಿ, ನಿನ್ನ ಕುಲದವನೇ?'

ಅವನು ಮೇಲೆದ್ದು ಕೂತು, ನಿರ್ದಯೆಯಿಂದ ಮತ್ತು ಕೋಪದಿಂದ ಚೆದುರಿದ್ದ ಅವಳ ಕಪ್ಪು ಕೂದಲಿನತ್ತ ನೋಡತೊಡಗಿದ.

'ನಾನು ಸದಾ ಪವಿತ್ರ ಭಾವದಿಂದ ಮತ್ತು ಮಹದಾನಂದದಿಂದ ನಿನ್ನ ಬಗ್ಗೆ ಯೋಚಿಸಿದ್ದೇನೆ. ಆದರೆ, ವಿಧಿ ಯಾವಾಗ ನಮ್ಮನ್ನು ಒಗ್ಗೂಡಿಸಿತ್ತು? ನೀನು ನನಗೇನಾಗಿದ್ದೆ? ನನ್ನ ಹೆಂಡತಿ? ಆಗ ಯೌವ್ವನವಿತ್ತು, ಖುಷಿಯಿತ್ತು, ಮುಗ್ಧತೆಯಿತ್ತು, ನಾಚಿಕೆಯಿತ್ತು, ಲ್ಯಾನ್ ಬಟ್ಟೆಯ ಚಂದದ ಶರ್ಟ್ ಇತ್ತು... ದಿನವೂ ಇನ್ನಿಲ್ಲದ ಉಮೇದಿನಿಂದ ನಿನ್ನನ್ನು ನೋಡಲು ಇಲ್ಲಿಗೆ ಬರುತ್ತಿದ್ದುದಾದರೂ ಯಾತಕ್ಕೆ... ನಿನ್ನ ಚಂದದ ಬಟ್ಟೆಗಳನ್ನು ನೋಡಲು, ಬಿಸಿಲಿಗೆ ಕಂದು ಬಣ್ಣಕ್ಕೆ ತಿರುಗಿದ ನಿನ್ನ ಬೆತ್ತಲೆ ತೋಳುಗಳನ್ನು ಹಾಗೂ ನಮ್ಮ ಪೂರ್ವಿಕರ ನೆತ್ತರನ್ನು ನೋಡಲು, ನಿನ್ನ ಬೆಳಗುತ್ತಿದ್ದ ಯೌವ್ವನದಲ್ಲಿ ಮೀಯಲು, ನನ್ನನ್ನೆಂದೂ ತುಂಬಿಕೊಳ್ಳದ, ಟಾಟರ್ ಕುಲದ ನಿನ್ನ ಈ ಹೊಳೆವ ಕಂಗಳನ್ನು ನೋಡಲು, ನಿನ್ನ ಕಪ್ಪು ಕೂದಲಿನಲ್ಲಿರುತ್ತಿದ್ದ ಹಳದಿ ಗುಲಾಬಿಯನ್ನು ನೋಡಲು, ದೂರದ ತೋಟದೊಳಗೆ ನಡೆಯುತ್ತಾ, ಯಾರನ್ನೋ ಮನಸ್ಸಿನೊಳಗೇ ಅರಸುತ್ತಿದ್ದ ನಿನ್ನ ಬೆರಗಿನ ನಗುವನ್ನು ನೋಡಲು, ನಿನ್ನ ಅಮ್ಮ ಉಪ್ಪರಿಗೆಯ ಮೇಲಿಂದ ನನ್ನನ್ನು ನಿಂದಿಸುತ್ತಿದ್ದುದನ್ನು ಕೇಳಿಸಿಕೊಂಡೂ ಕ್ರೋಕೇ ಆಟ ಆಡುವ ನಟನೆ ಮಾಡುತ್ತಲೇ ನೀನು ಚೆಂಡನ್ನು ಅಟ್ಟುತ್ತಿದ್ದ ಪರಿಯನ್ನು ನೋಡಲು... ಹೇಳು, ಯಾವುದಕ್ಕಾಗಿ?'

'ಇದಕ್ಕೆ, ಈ ಎಲ್ಲದಕ್ಕೂ ನೀನು ದೂಷಿಸಬೇಕಿರುವುದು ಅವಳನ್ನೇ ಹೊರತು, ನನ್ನನ್ನಲ್ಲ' ವಿಯರ ಪ್ರಯಾಸದಿಂದ ಅಂದಳು.

'ಇಲ್ಲ! ನೀನು ಮೊದಲ ಬಾರಿ ಮಾಸ್ಕೊಗೆ ಹೋದದ್ದನ್ನ ನೆನಪಿಸಿಕೊ; ನೀನಾಗ ಬಟ್ಟೆಬರೆಗಳನ್ನೋ ಮತ್ತಿನ್ನೇನನ್ನೋ ಪ್ಯಾಕ್ ಮಾಡುತ್ತಿದ್ದೆ, ಅನ್ಯಮನಸ್ಕಳಾಗಿ ಏನನ್ನೋ ಹಾಡಿಕೊಳ್ಳುತ್ತಿದ್ದೆ, ಕನಿಷ್ಠ ನನ್ನ ಕಡೆಗೆ ನೋಡದೆ ಕನಸಿನಲ್ಲಿ ಮುಳುಗಿಹೋಗಿದ್ದವಳಂತೆ ಪೂರಾ ತಲ್ಲೀನಳಾಗಿದ್ದೆ. ಅಲ್ಲಿ ನಿನಗೆ ನಿಜಕ್ಕೂ ಖುಷಿ ಸಿಕ್ಕಿದೆಯೇ ಸಿಗುತ್ತೆ ಅನ್ನುವ ಅಚಲ ನಂಬಿಕೆ ನಿನ್ನೊಳಗಿತ್ತು. ನಿನ್ನನ್ನು ನೋಡಲೆಂದು ನಾನು ಕುದುರೆಯನ್ನೇರಿ ಬಂದಿದ್ದೆ. ಅದೊಂದು ಥಂಡಿಯಿಂದ ಮುಪ್ಪರಿಯುತ್ತಿದ್ದ ಸಂಜೆ. ಹೊಳೆಯುತ್ತಿದ್ದ ಹಸಿರು ಹುಲ್ಲು, ಗುಲಾಬಿ ಗಿಡದ ಕೂಳೆಗಳ ಆ ಬಯಲು, ನಿನ್ನ ಟ್ರೈನಿನ ತೆರೆದ ಕಿಟಕಿಗೆ ಹಾಕಿದ್ದ ಆ ಪರದೆ... ಓಹ್, ದೇವರೇ!' ಆಗ ಅವನ ದನಿಯಲ್ಲಿ ಸಣ್ಣದೊಂದು ಹಗೆತನ ಹೆಡೆಯಾಡಿತು. ಕಣ್ಣುಗಳು ತುಂಬಿ ಬಂದವು. ಹಾಗೆ ಅಂದ ಅವನು ಮತ್ತೆ ದಿಂಬಿಗೆ ಒರಗಿ ಮಲಗಿದ.

'ನಿನ್ನ ಕೈಗಳಲ್ಲಿ ವರ್ಬೀನ ಗಿಡದ ಅತ್ತರಿತ್ತು. ಅದು ನನ್ನ ಕೈಗಳಿಗೂ ಹತ್ತಿಕೊಂಡು ಘಮಗುಡುತ್ತಿತ್ತು. ಜೊತೆಗೆ, ಅದು ನನ್ನ ಕುದುರೆಯ ಜೀನು, ಅದರ ಬೆವರಿನ ವಾಸನೆಯೊಂದಿಗೂ ಬೆರೆತುಹೋಗಿತ್ತು. ಆದರೆ, ಅಂದಿನ ಆ ಘಮಲು ಈಗಲೂ ನನ್ನ ಮೂಗಿನ ತುದಿಯಲ್ಲೇ ಕೂತಿದೆ. ಆವತ್ತು ಮುಖ್ಯ ರಸ್ತೆಯ ಉದ್ದಕ್ಕೂ ನಾನು ಕುದುರೆ ಓಡಿಸಿಕೊಂಡು ಬಂದೆ, ಆ ಮುಸ್ಸಂಜೆಯಲ್ಲಿ, ಅಳುತ್ತಾ ನಾನೊಬ್ಬನೇ... ಆದುದರಿಂದ ತನ್ನದೆಲ್ಲವನ್ನೂ ಬಿಟ್ಟುಕೊಟ್ಟ, ತನ್ನಿಡೀ ಬದುಕನ್ನೇ ತ್ಯಾಗ ಮಾಡಿದ ಯಾರಾದರೂ ಒಬ್ಬ ಇದ್ದಲ್ಲಿ, ಅದು ನಾನೇ, ಈ ಮುದಿ ಕುಡುಕ!'

ಕಣ್ಣೀರಿನ ಬೆಚ್ಚನೆಯ ಉಪ್ಪುಪ್ಪು ಹನಿಗಳು ಅವನ ಕೆನ್ನೆಗಳ ಮೇಲಿಂದ ಹರಿದು, ಮೀಸೆಗಳನ್ನು ತಟಾಯ್ದು ತುಟಿಗಳಿಗಿಳಿಯುತ್ತಿದ್ದಂತೆ, ಅವನಿಗೆ ಅವುಗಳ ಅನುಭವವಾಗಿ, ಮಲಗಿದ್ದ ಅವನು ಮೇಲೆದ್ದು ಆ ರೂಮಿನಿಂದ ಆಚೆ ನಡೆದ.

ಚಂದ್ರ ಮುಳುಗುತ್ತಿದ್ದ. ಸ್ಪಂಜಿನಂಥಾ ಕಾವಳ ಗುಡ್ಡದ ಕೆಳಗಿನ ಬಯಲುಗಳಿಗೆ ಜೋತು ಬಿದ್ದಿತ್ತು.